MC No. 01/2025
PW-1

**(ಇಂದು ದಿಃ 29-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಂದುವರೆದ ಮುಖ್ಯ ವಿಚಾರಣೆಃ- ಅರ್ಜಿದಾರರ ಪರ ಶ್ರೀ.AM ವಕೀಲರಿಂದಃ-**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರತಿಜ್ಞಾ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನ್ನ ತಿಳುವಳಿಕೆಯ ಮೇರೆಗೆ ಬರೆಯಲ್ಪಟ್ಟಿರುತ್ತವೆ ಮತ್ತು ಅವು ಸತ್ಯವಾಗಿರುತ್ತವೆ. ಪ್ರತಿಜ್ಞಾ ಪತ್ರಕ್ಕೆ ಸಹಿ ಮಾಡಿರುತ್ತೇನೆ.

- Certificate of Registration of Hindu Marriage ಅನ್ನು ನಿಪಿ-1 ಎಂದು, Memorandum of Marriage ಅನ್ನು ನಿಪಿ-2 ಎಂದು, ಕಲಬುರಗಿಯ ಮಹಿಳಾ ಪೊಲೀಸ್ ಠಾಣೆಯ ಅಪರಾದ ಸಂಖ್ಯೆ 33/2024 ರ ಪ್ರ. ಥ . ವ ಯನ್ನು ನಿಪಿ-4 ಎಂದು, ದೂರನ್ನು ನಿಪಿ-5 ಎಂದು, ಅಂತೀಮ ವರದಿಯನ್ನು ನಿಪಿ-6 ಎಂದು, ಪಂಚನಾಮೆಯನ್ನು ನಿಪಿ-7 ಎಂದು, ಲೋಕೋಪಯೋಗಿ ಇಲಾಖೆ ಯವರು ಮಹಿಳಾ ಪೊಲೀಸ್ ಠಾಣೆಗೆ ಬರೆದ ಪತ್ರವನ್ನು ನಿಪಿ-8 ಎಂದು, ಆರೋಪಿಯ ಮನೆಯ ನಕ್ಷೆಯನ್ನು ನಿಪಿ-9 ಎಂದು, ಗುನ್ನೆ ಸ್ಥಳದ ಪಂಚನಾಮೆ ಕಾಲಕ್ಕೆ ತೆಗೆದ ಪೋಟೋದ ದೃಡೀಕೃತ ನಕಲನ್ನು ನಿಪಿ-10 ಎಂದು, ದಿನಾಂಕ 22.09.2023 ರಂದು ಮಾಡಿದ ಪಂಚನಾಮೆಯನ್ನು ನಿಪಿ-11 ಎಂದು, ಅರ್ಜಿದಾರಳು ಪೊಲೀಸರ ಮುಂದೆ ನೀಡಿದ್ದ ಹೇಳಿಕೆಯ ದೃಡೀಕೃತ ನಕಲನ್ನು ನಿಪಿ-12 ಎಂದು, 6 ಜನ ಸಾಕ್ಷಿದಾರರು ಪೊಲೀಸರಿಗೆ ನೀಡಿದ್ದ ಹೇಳಿಕೆಗಳ ದೃಡೀಕೃತ ನಕಲುಗಳನ್ನು ನಿಪಿ-13 ರಿಂದ 18 ಎಂದು, 3 ಗಾಯದ ಪ್ರಮಾಣ ಪತ್ರಗಳನ್ನು ನಿಪಿ-19 ರಿಂದ 21 ಎಂದು, ಸುಭಾಷರವರು ಪೊಲೀಸರ ಮುಂದೆ ನೀಡಿದ್ದ ಹೇಳಿಕೆಯ ದೃಡೀಕೃತ ನಕಲನ್ನು ನಿಪಿ-22 ಎಂದು, ನಾರಾಯಣ ASI ರವರು ಸಲ್ಲಿಸಿದ್ದ ಪ್ರಮಾಣ ಪತ್ರವನ್ನು ನಿಪಿ-23 ಎಂದು, ಶೀರೊಳ್ಳಿ ಗ್ರಾಮ ಪಂಚಾಯತಿಯವರು ನೀಡಿದ ಪತ್ರ ಮತ್ತು 3 ಖಾತಾ ಉತಾರೆಗಳನ್ನು ನಿಪಿ-24 ರಿಂದ 27 ಎಂದು, ಒಂದು ಪಹಣಿಯನ್ನು ನಿಪಿ-28 ಎಂದು ಗುರುತಿಸಲಾಯಿತು.

**(ಅರ್ಜಿದಾರರ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,ಸೇಡಂ.**